**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ನಂಜನಗೂಡು**

**ಸಿ.ಸಿ.477/2026**

**ಫಿರ್ಯಾದಿಃ** ರಾಜ್ಯದ ಪರವಾಗಿ ಕವಲಂದೆ ಪೊಲೀಸ್ ಠಾಣೆ

ವಿರುದ್ಧ

**ಆರೋಪಿಃ** ಗಣೇಶ ಬಿನ್ ಲೇಟ್ ಗುರುಸಿದ್ದಯ್ಯ 40 ವರ್ಷ,

ವಾಸಃದೊಡ್ಡ ಕವಲಂದೆ ಗ್ರಾಮ, ನಂಜನಗೂಡು ತಾಲ್ಲೂಕು

ಃ ಆಪಾದನೆ ಃ

ಶ್ರೀಮತಿ.ಸರಿತ ಕುಮಾರಿ.ಎ.ಎಂ, ಬಿ.ಎ.,ಎಲ್.ಎಲ್.ಬಿ., 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆಃ-

ದಿಃ19.02.2026 ರಂದು ಸಂಜೆ 05.15 ಗಂಟೆ ಸಮಯದಲ್ಲಿ ಕವಲಂದೆ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ದೊಡ್ಡ ಕವಲಂದೆ ಗ್ರಾಮದ ಪರಿಶಿಷ್ಟ ಬೀದಿಯ ಮಾರಮ್ಮನ ದೇವಸ್ಥಾನದ ಬಳಿ ಇರುವ ಚಿಲ್ಲರೆ ಅಂಗಡಿ ಮುಂಭಾಗ ಸಾರ್ವಜನಿಕ ರಸ್ತೆಯಲ್ಲಿ ಆರೋಪಿತರಾದ ನೀವು ಯಾವುದೇ ರಹದಾರಿ/ಪರವಾನಿಗೆ ಇಲ್ಲದೆ ರೂ.400/- ಬೆಲೆ ಬಾಳುವ 90 ಎಂ ಎಲ್ ನ 8 ಹೇವರ್ಡ್ಸ್ ಚಿಯರ್ಸ ವಿಸ್ಕಿಯ ಟಾಟ್ರಾ ಪ್ಯಾಕೇಟುಗಳನ್ನು ಅಕ್ರಮವಾಗಿ ಇಟ್ಟುಕೊಂಡು ಸಾರ್ವಜನಿಕರಿಗೆ ಮದ್ಯಸೇವನೆ ಮಾಡಲು ಅನುವು ಮಾಡಿಕೊಟ್ಟಿರುವುದರಿಂದ, ಕರ್ನಾಟಕ ಅಬಕಾರಿ ಕಾಯ್ದೆ ಕಲಂ.15(ಎ) ಮತ್ತು 32(3) ರ ರೀತ್ಯಾ ನಿಮ್ಮ ಮೇಲೆ ಆಪಾದಿಸಲಾಗಿದೆ.

**ಈ ಮೇಲ್ಕಂಡ ಆರೋಪಗಳ ಬಗ್ಗೆ ವಿಚಾರಣೆಗೆ ಈ ಕೆಳಕಂಡಂತೆ ಆದೇಶಿಸುತ್ತೇನೆ.**

ಪ್ರಶ್ನೆ-1 ಃ ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ?

ಉತ್ತರ ಃ

ಪ್ರಶ್ನೆ-2 ಃ ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ ವಿಚಾರಣೆಯಾಗಬೇಕೋ?

ಉತ್ತರ ಃ

ಮೇಲ್ಕಂಡ ಆಪಾದನೆಗಳನ್ನು ಆರೋಪಿತರಾದ ನಿಮ್ಮನ್ನು ನ್ಯಾಯಾಲಯದ ಅಧಿವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.

ದಿನಾಂಕಃ25.02.2026 — 1ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.

ಸ್ಥಳ ಃ ನಂಜನಗೂಡು — ನಂಜನಗೂಡು